## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 77/2018 ಸಿಡಬ್ಲೂ : 5 ಪಿಡಬ್ಲೂಃ 1

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ಮರೆಪ್ಪ

ತಂದೆ ಹೆಸರು : ಭೀಮಪ್ಪ ನಾಟಿಕರ್

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ನೀರೀಕ್ಷಕ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 02-04-2012 ರಿಂದ 04-09-2015 ರವರೆಗೆ ಸೇಡಂ ವಲಯದ ಅಬಕಾರಿ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.09-10-2013 ರಂದು 02-30 ಗಂಟೆ ಸುಮಾರಿಗೆ ಮದಕಲ್ ಗ್ರಾಮದಲ್ಲಿ ಜಗನ್ನಾಥ ತಂದೆ ರಾಮಯ್ಯ ಎಂಬುವರು ತನ್ನ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಸಂಗ್ರಹಣೆ ಮಾಡಿ ಮಾರಾಟ ಮಾರುತ್ತಿದ್ದಾರೆ ಎಂದು ಬಾತಿಮಿ ಬಂದಿತ್ತು. ತಕ್ಷಣ ಪಂಚರನ್ನು ಬರ ಮಾಡಿಕೊಂಡು ಬತಮಿ ಬಂದ ವಿಷಯವನ್ನು ತಿಳಿಸಿ ಒಂದು ವೇಳೆ ಅಲ್ಲಿನ ಜನರು ಪಂಚರಾಗಲು ಒಪ್ಪಿ ಕೊಳ್ಳಲಿಲ್ಲ ಎಂದರೆ ತಾವು ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಪಂಚರಾಗಲು ಒಪ್ಪಿ ಕೊಂಡಿದ್ದು. ನಂತರ ಸರ್ಕಾರಿ ವಾಹನ ಸಂಖ್ಯೆ ಕೆಎ 32 ಜಿ 477 ಮುಖಾಂತರ ಸಿಬ್ಬಂದಿಯೊಂದಿಗೆ ಮತ್ತು ಪಂಚರಿಗೆ ಜೊತೆಯಲ್ಲೆ ಕರೆದುಕೊಂಡು 04-00 ಗಂಟೆಗೆ ಸದರಿ ಸ್ದಳಕ್ಕೆ ಭೇಟಿ ನೀಡಿದೆವು. ಆಗ ನಮ್ಮ ಮತ್ತು ಸಿಬ್ಬಂದಿಯವರಿಗೆ ಗಮನಿಸಿ ಆ ಮನೆಯಿಂದ ಒರ್ವ ವ್ಯಕ್ತಿ ಮನೆಯಿಂದ ಓಡಿ ಹೋಗಿರುತ್ತಾನೆ. ಆತನಿಗೆ ಹಿಡಿಯಲು ಪರಯತ್ನಿಸಿದರು ಸಹ ಸಿಕ್ಕಿರುವುದಿಲ್ಲ. ತದ ನಂತರ ಸದರಿ ಮನೆಯಲ್ಲಿ ತಪಾಸಣೆ ಮಾಡಲು ಸಮುಚಿತಾ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ ಸದರಿ ಮನೆಯಲ್ಲಿ ಬಚ್ಚಲ ಪಕ್ಕದಲ್ಲಿ ಒಂದು ದೊಡ್ಡ ನೀಲಿ ಬಣ್ಣದ ಬಾರಲ್ ಇತ್ತು ಅದನ್ನು ನೋಡಲಾಗಿ ಅದರಲ್ಲ್ ಬಿಳಿಯ ಬಣ್ಣದ ದ್ರವ ಪದಾರ್ಥ ಇತ್ತು ಅದು ಅತ್ಯಂತ ಕೆಟ್ಟ ಗಾಟು ವಾಸನೆಯಿಂದ ಕೂಡಿದ್ದು ಇತ್ತು. ಆಗ ಅದು ಕಲಬೆರಕೆ ಸೇಂದಿ ಎಂದು ಖಚಿತ ಪಡಿಸಿಕೊಂಡು ನೋಡಲಾಗಿ ಸದರಿ ಬ್ಯಾರಲ್ ನಲ್ಲಿ 150 ಲೀ ನಷ್ಟು ಕಲಾಬೆರಕೆ ಸೇಂದಿ

ಇತ್ತು. ಅದರಲ್ಲಿ 180 ಎಂ ಎಲ್ ಬಾಟಲಿಯಲ್ಲಿ ತೆಗೆದು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಜಪ್ತಿ ಮಾಡಲಾಯಿತು. ನಂತರ ಅಲ್ಲಿರುವ ಜನರಿಗೆ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರ ಹೆಸರು ಜಗನ್ನಾಥ್ನ ತಂದೆ ರಾಮಯ್ಯ ಎಂದು ಗೊತ್ತಾಗುತ್ತದೆ. ಸದರಿ ಕಲಬೆರಕೆ ನಮ್ಮ ವಶಕ್ಕೆ ಪಡೆದುಕೊಂಡು ಸಾಯಂಕಾಲ 04-00 ರಿಂದ 05-00 ಗಂಟೆಯ ವರೆಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು, ಅದೇ ರೀತಿ ಶೋದನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮಾದರಿ ಮೊಹರಿನ ನಕಲನ್ನು ನೋಡಿ ಗುರುತಿಸಿದ್ದು ನಿ ಪಿ 3 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ನಂತರ ಕಛೇರಿಗೆ ಬಂದು ಸದರಿ ಆರೋಪಿಯ ವಿರುದ್ದ ಪ್ರ ವ ವರದಿಯನ್ನು ತಯಾರಿಸಿ ಮಾನ್ಯ ಅಬಕಾರಿ ಉಪಆಯುಕ್ತರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿ ಪ್ರ ವ ವರದಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 4 (ಎ) ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಣೆಗಾಗಿ ಎಫ್ ಎಸ್ ಎಲ್ ಗೆ ಕಳುಹಿಸಲಾಯಿತು. ಸದರಿ ಪತ್ರವನ್ನು ನೋಡಿ ಗುರುತಿಸಿದ್ದುಅ ದನ್ನು ನಿ ಪಿ 5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ಅದೇ ರೀತಿ 20-12-2014 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿರುತ್ತೆನೆ ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದುಅದನ್ನು ನಿ ಪಿ 6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಒಂದು 180 ಎಂ ಎಲ್ ನ ಬಾಟಲಿಗಳನ್ನು ನೋಡಿ ಗರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ದಿ. 05-12-2016 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟಿ ಸವಾಲು ಃ ಆರೋಪಿ ಪರ ಶ್ರೀ ಎ ಎಂ ವಕೀಲರಿಂದಃ**

ದಿ.09-10-2013 ರಂದು 02-30 ಗಂಟೆ ಸುಮಾರಿಗೆ ಮದಕಲ್ ಗ್ರಾಮದಲ್ಲಿ ಜಗನ್ನಾಥ ತಂದೆ ರಾಮಯ್ಯ ಎಂಬುವರು ತನ್ನ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಸಂಗ್ರಹಣೆ ಮಾಡಿ ಮಾರಾಟ ಮಾರುತ್ತಿದ್ದಾರೆ ಎಂದು ಬಾತಿಮಿ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ತಕ್ಷಣ ಪಂಚರನ್ನು ಬರ ಮಾಡಿಕೊಂಡು ಬತಮಿ ಬಂದ ವಿಷಯವನ್ನು ತಿಳಿಸಿ

ಒಂದು ವೇಳೆ ಅಲ್ಲಿನ ಜನರು ಪಂಚರಾಗಲು ಒಪ್ಪಿ ಕೊಳ್ಳಲಿಲ್ಲ ಎಂದರೆ ತಾವು ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಪಂಚರಾಗಲು ಒಪ್ಪಿ ಕೊಂಡಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸರ್ಕಾರಿ ವಾಹನ ಸಂಖ್ಯೆ ಕೆಎ 32 ಜಿ 477 ಮುಖಾಂತರ ಸಿಬ್ಬಂದಿಯೊಂದಿಗೆ ಮತ್ತು ಪಂಚರಿಗೆ ಜೊತೆಯಲ್ಲೆ ಕರೆದುಕೊಂಡು 04-00 ಗಂಟೆಗೆ ಸದರಿ ಸ್ಥಳಕ್ಕೆ ಭೇಟಿ ನೀಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಮ್ಮ ಮತ್ತು ಸಿಬ್ಬಂದಿಯವರಿಗೆ ಗಮನಿಸಿ ಆ ಮನೆಯಿಂದ ಒರ್ವ ವ್ಯಕ್ತಿ ಮನೆಯಿಂದ ಓಡಿ ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆತನಿಗೆ ಹಿಡಿಯಲು ಪರಯತ್ನಿಸಿದರು ಸಹ ಸಿಕ್ಕಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ತದ ನಂತರ ಸದರಿ ಮನೆಯಲ್ಲಿ ತಪಾಸಣೆ ಮಾಡಲು ಸಮುಚಿತಾ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ ಸದರಿ ಮನೆಯಲ್ಲಿ ಬಚ್ಚಲ ಪಕ್ಕದಲ್ಲಿ ಒಂದು ದೊಡ್ಡ ನೀಲಿ ಬಣ್ಣದ ಬಾರಲ್ ಇತ್ತು ಅದನ್ನು ನೋಡಲಾಗಿ ಅದರಲ್‌ಲ್ ಬಿಳಿಯ ಬಣ್ಣದ ದ್ರವ ಪದಾರ್ಥ ಇತ್ತು ಅದು ಅತ್ಯಂತ ಕೆಟ್ಟ ಗಾಟು ವಾಸನೆಯಿಂದ ಕೂಡಿದ್ದು ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಅದು ಕಲಬೆರಕೆ ಸೇಂದಿ ಎಂದು ಖಚಿತ ಪಡಿಸಿಕೊಂಡು ನೋಡಲಾಗಿ ಸದರಿ ಬ್ಯಾರಲ್ ನಲ್ಲಿ 150 ಲೀ ನಷ್ಟು ಕಲಾಬೆರಕೆ ಸೇಂದಿ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ 180 ಎಂ ಎಲ್ ಬಾಟಲಿಯಲ್ಲಿ ತೆಗೆದು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಜಪ್ತಿ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅಲ್ಲಿರುವ ಜನರಿಗೆ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರ ಹೆಸರು ಜಗನ್ನಾಥ್ಮ ತಂದೆ ರಾಮಯ್ಯ ಎಂದು ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಕಲಬೆರಕೆ ನಮ್ಮ ವಶಕ್ಕೆ ಪಡೆದುಕೊಂಡು ಸಾಯಂಕಾಲ 04-00 ರಿಂದ 05-00 ಗಂಟೆಯ ವರೆಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆ ಗೊಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ಯಾವುದೇ ಅಪರಾದ ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿಕೊಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

(ಮರುವಿಚಾರಣೆ ಇಲ್ಲ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**